ಮಾಡುವವರ ಸಾಲಿಗೆ ನಿಮ್ಮಂಥವರೂ ಸೇರುತ್ತಾರೆ. ಈ ಸಮಾಜದಲ್ಲಿ ಪತ್ನಿ ಮಾತ್ರ ಇಂತಹ ಗಂಡಂದಿರನ್ನು ಸ್ವೀಕರಿಸಲು ಬಾಧ್ಯಳಾಗುತ್ತಾಳೆ. ಇದು ಆಕೆಯ ಅನಿವಾರ್ಯತೆ, ಅಸಹಾಯಕತೆ ಎಂದೆಲ್ಲ ನೀವು ಹೇಳಬಹುದು. ಆದರೆ ಇಲ್ಲಿ ನಾನು ಆರ್ಥಿಕವಾಗಿ ಆಶ್ರಿತಳಾಗಿರುವ ಸ್ತ್ರೀ ಬಗ್ಗೆ ಮಾತಾಡುತ್ತಿಲ್ಲ. ಬದಲಾಗಿ ಆರ್ಥಿಕವಾಗಿ ಅವಲಂಬಿತಳಲ್ಲದವಳ ಬಗ್ಗೆ ಹೇಳುತ್ತಿದ್ದೇನೆ. ಅಂತಹ ಸ್ತ್ರೀಯ ಸಂಸ್ಕೃತಿ–ಸಂಸ್ಕಾರದ ಬಗ್ಗೆ ನೀವು ಅಸಹ್ಯ ವ್ಯಕ್ತಪಡಿಸಬಹುದು. ಈ ಮಾತು ತಮ್ಮ ಸಂಸ್ಕಾರಹೀನ ಗಂಡಂದಿರನ್ನು ಸಹಿಸಿಕೊಳ್ಳುವ ಎಲ್ಲಾ ಪತ್ನಿಯರಿಗೆ ಅನ್ವಯಿಸುತ್ತದೆ. ಹೌದು, ಆದರೆ ಅದೇ ಹೊತ್ತಿನಲ್ಲಿ ಒಬ್ಬಳು ಮಹಿಳೆಯನ್ನು ಒಪ್ಪಿಕೊಳ್ಳಲು ನಿಮ್ಮ ಸಮಾಜ ತಯಾರಿಲ್ಲವಲ್ಲ!

ನಾನು ಬೇರೆಯವರ ಬಗ್ಗೆ ಏಕೆ ಮಾತಾಡಲಿ? ಮದುವೆಗೆ ಮೊದಲಿನ ಸಂಬಂಧಗಳನ್ನು ಮರೆತುಬಿಡಬೇಕೆಂದು ನೀವು ಸ್ಪಷ್ಟವಾಗಿ ಹೇಳಿದ್ದಿರಿ. ನೀವು ಮರೆತಿರಾ? ಮರೆತಿದ್ದೇ ಆಗಿದ್ದಿದ್ದರೆ ನೀವು ಈ ರೀತಿಯ ನಿರ್ಣಯಕ್ಕೆ ಬರುತ್ತಿರಲಿಲ್ಲ. ನೀವು ಒಬ್ಬ ಶಕ್ತಹೀನ ಹೆದರುಪುಕ್ಕಲ ವ್ಯಕ್ತಿ. ಕೇವಲ ನನ್ನ ವಿವಾಹಪೂರ್ವ ಸಂಬಂಧವನ್ನು ಮಾತ್ರ ತಿಳಿದುಕೊಳ್ಳಲು 'ಹಳೆಯದೆಲ್ಲವನ್ನು ಬಿಡಬೇಕು' ಎಂಬ ನಿಮ್ಮ ಜಾಣ್ಮೆಯ ಗ್ರಹಿಕೆ ಒಂದು ವೇಳೆ ನನಗೆ ಆಗಲೇ ಅರ್ಥವಾಗಿಬಿಟ್ಟಿದ್ದರೆ ನಾನೂ ಸಹ ಒಬ್ಬ ಚಾಲಾಕಿ ಯುವತಿ ನೀಡುವ ಉತ್ತರವನ್ನೇ ನೀಡುತ್ತಿದ್ದೆ. ಎಷ್ಟಾದರೂ ನೀವು ಕಲಾವಿದರು...! ತಾನು ಬೇರೆಯವರಿಗಿಂತ ಭಿನ್ನ ಎಂದು ಎಷ್ಟೋ ಬಾರಿ ಹೇಳಿದ್ದಿರಿ. ಕಲಾವಿದ... ಹೌದು ಒಬ್ಬ ಕಲಾವಿದ ಮಾತ್ರ ತನ್ನ ಪತ್ನಿಯಾದವಳ ವಿವಾಹಪೂರ್ವ ಸಂಬಂಧದಿಂದ ಉಂಟಾದ ನೈತಿಕ ಸ್ಖಲನವನ್ನು ತಾಳಿಕೊಳ್ಳಲು ಸಾಧ್ಯ. ಅಂತಹ ಮಾನಸಿಕ ದೃಢತೆ ನನ್ನಲ್ಲಿ ಇದೆ... ಎಂದು ಆಗ ಹೇಳಿದ ಈ ವಾಕ್ಯ ನಿಮ್ಮದೇ ತಾನೆ...! ಆದರೆ ಇಷ್ಟೆಲ್ಲಾ ಹೇಳಿದ ಮೇಲೆಯೂ ನೀವು ಬೇರೆಯವರಿಂದ ನನ್ನ ಬಗ್ಗೆ ಮಾಹಿತಿ ಸಂಗ್ರಹಿಸತೊಡಗಿದ್ದಿರಿ. ನಿಮ್ಮಲ್ಲಿ ಅಂತಹ ದೃಢತೆ, ನೈತಿಕ ಧೈರ್ಯ ಇರಲಿಲ್ಲ ವಿಫುಲ್...! ಇದ್ದಿದ್ದೇ ಆಗಿದ್ದಿದ್ದರೆ ನೀವು ನನಗೆ ಮುಖಾಮುಖಿಯಾಗುತ್ತಿದ್ದಿರಿ. ಆಗ ನಾನು ನಿಮ್ಮ ಹಾಗೆ ಅಂಜುಬುರುಕಿಯಾಗದೆ ಎಲ್ಲವನ್ನೂ ಖುಲ್ಲಂಖುಲ್ಲಾ ಹೇಳಿಬಿಡುತ್ತಿದ್ದೆ. ಆದರೆ ನೀವೂ ಸಹ ಬೇರೆ ವ್ಯಕ್ತಿಯಂತೆಯೇ ಆಗಿಬಿಟ್ಟಿರಿ.

ನಾವು ಇಷ್ಟು ವರ್ಷಗಳಿಂದ ಒಟ್ಟಿಗೆ ಬದುಕುತ್ತಿದ್ದೇವೆ. ನಮಗಿಬ್ಬರು ಮಕ್ಕಳೂ ಸಹ ಇದ್ದಾರೆ. ಅವರಿಗೆ ದೈಹಿಕ ಅವಶ್ಯಕತೆಗಳು ಮತ್ತದರ ಪರಿಣಾಮಗಳ ಬಗ್ಗೆ ಈಗಿನಿಂದಲೇ ತಿಳಿಸಿ ಹೇಳಬೇಕೆಂದು ನೀವೇ ಒಮ್ಮೆ ಹೇಳಿದ್ದಿರಿ ಕೂಡ. ಎಲ್ಲವೂ ತಿಳಿದ ಮೇಲೆಯೂ ನೀವು ಮಾತ್ರ ನನ್ನ ಗತಜೀವನವನ್ನು ಮರೆಯಲಾರದೇ ಹೋದಿರಿ. ಒಬ್ಬ ಮಹಿಳೆ ಪುರುಷನಿಗಿಂತಲೂ ಹೆಚ್ಚು ತೀಕ್ಷ್ಣ ದೃಷ್ಟಿ ಉಳ್ಳವಳಾಗಿರುತ್ತಾಳೆ ಎಂಬುದನ್ನು ನೀವು ಅರ್ಥಮಾಡಿಕೊಳ್ಳಬೇಕು. ಹಾಗೇನೇ ಮನೋಭಾವಗಳನ್ನು ಅರ್ಥೈಸುವುದರಲ್ಲಿ ಮತ್ತು ಗುರುತಿಸುವುದರಲ್ಲಿ ಅದೆಷ್ಟೋ ಹೆಚ್ಚುಪಟ್ಟು



ಕ್ಷಮತೆಯನ್ನು ಪಡೆದಿರುತ್ತಾಳೆ. ನೀವು ಗ್ರೇಟ್ ಅಲ್ಲವೆ...! ಆದುದರಿಂದಲೇ ವಿಷಯವನ್ನು ವ್ಯಕ್ತಪಡಿಸುವ ಮತ್ತು ಅದರಿಂದ ಉಂಟಾಗುವ ಪರಿಣಾಮವನ್ನು ಗ್ರಹಿಸುವ ನಿಮ್ಮನ್ನು ನನ್ನ ಗತಬದುಕಿನ ಸಂಗತಿಗಳು ಹಿಂಸಿಸಲಾರಂಭಿಸಿದವು. ಜೊತೆಗೆ ಕಲಾವಿದ ಆದಕಾರಣ ತೋರ್ಪಡಿಕೆಯ ನಾಟಕವನ್ನು ನೀವು ಪ್ರದರ್ಶಿಸಬೇಕಾಗಿತ್ತು. ಇಷ್ಟು ಸಮಯದವರೆಗೂ ಅದನ್ನೇ ಮಾಡಿಕೊಂಡು ಬಂದಿರಿ.

ನಿಮಗೆ ಗೊತ್ತಿದೆ... ಈ ಸಮಾಜದಲ್ಲಿ ಸ್ತ್ರೀಯ ದೈಹಿಕ ಶೋಷಣೆ ನಡೆಯುತ್ತಲೇ ಇರುತ್ತದೆ ಮತ್ತು ಆಕೆ ನಂಬಿದವರಿಂದಲೇ ಹೆಚ್ಚಾಗಿ ಶೋಷಣೆಗೆ ಒಳಗಾಗುತ್ತಿದ್ದಾಳೆ. ಬಹುಶಃ ಈ ಬಗ್ಗೆ ನಿಮಗೆ ತಿಳಿವಳಿಕೆ ಇಲ್ಲದಿರಲೂ ಸಾಕು... ಆದರೆ ಈಗ ನೀವು ನನ್ನ ಎದುರಿಗೆ ಇಲ್ಲದಿದ್ದರೂ ಅದನ್ನು ಹೇಳಿಬಿಡುತ್ತೇನೆ. ಇದರಿಂದ ಮನಸ್ಸು ಸ್ವಲ್ಪ ಹಗುರವಾಗುತ್ತದೆ. ನೀವು ಆಗಲೇ ಕೇಳಿದ್ದಿದ್ದರೆ ನನ್ನ ಮನಸ್ಸಿಗೆ ಅಂದೇ ನೆಮ್ಮದಿ ಸಿಗುತ್ತಿತ್ತು. ಇರಲಿ. ಮೊದಲ ಬಾರಿಗೆ ನನ್ನ ಬಗ್ಗೆಯೂ ಹಾಗೇ ಆಗಿತ್ತು. ಅವರು ನನ್ನ ಖಾಸಾ ಎರಡನೇ ಅಕ್ಕನ ಗಂಡ. ಈಗ ಅವರು ಇಲ್ಲ ಎಂದರೆ ಬದುಕಿಲ್ಲ. ಕುಡಿತದ ಚಟದಿಂದ ಅವರಿಗೆ ಸಾವು ಬಂತು. ಅವರು ಲಖನೌನಲ್ಲಿದ್ದರು. ನಮ್ಮಲ್ಲಿಗೆ ಅಂದರೆ ಮಾವನ ಮನೆಗೆ ಬಂದಾಗ ದೇವತಾಮೂರ್ತಿಯಂತೆ ಇರುತ್ತಿದ್ದರು. ಕುಡಿಯುವುದಿರಲಿ, ಶರಾಬಿನ ಶಬ್ದವನ್ನೂ ಹೊರಡಿಸುತ್ತಿರಲಿಲ್ಲ. ತಮ್ಮ ಶರಾಬಿನ ಚಟದ ಬಗ್ಗೆ ಮನೆಯಲ್ಲಿ ಯಾವ ಕಾರಣಕ್ಕೂ ಉಸಿರೆತ್ತಬಾರದೆಂದು ಅಕ್ಕನಿಗೆ ತಾಕೀತು ಮಾಡಿದ್ದರು. ನನ್ನ ಅಕ್ಕ ಎಷ್ಟು ಮುಗ್ಧೆ ಎಂದರೆ ಅವರು ದಿನಕ್ಕೆ ಒಂದು ಬಾಟಲು ಶರಾಬು ಖಾಲಿ ಮಾಡುತ್ತಿದ್ದರೂ ಮನೆಯಲ್ಲಿ ಏನೂ ಸಹ ಗೊತ್ತಿಲ್ಲದವಳಂತೆ ಇರುತ್ತಿದ್ದಳು.

ಅವರು ನಮ್ಮ ಮನೆಗೆ ಬಂದಾಗಲೆಲ್ಲ ಮನೆಯವರೆಲ್ಲ ಮುಕ್ತವಾಗಿ ಖುಷಿಯಿಂದ ಬೆರೆಯುತ್ತಿದ್ದರು. ಆಗ ನನಗೆ ಹದಿನೇಳು ವರ್ಷ. ಇಂಟರ್‌ಮೀಡಿಯಟ್ ಓದುತ್ತಿದ್ದೆ. ನನಗಿಂತ ಐದು ವರ್ಷ ದೊಡ್ಡವಳಾಗಿದ್ದ ನನ್ನ ಇನ್ನೊಬ್ಬ ಅಕ್ಕ ಹಿಂದಿಯಲ್ಲಿ ಎಂ.ಎ. ಮುಗಿಸಿ ಪಿ.ಎಚ್‌ಡಿ. ತಯಾರಿ ನಡೆಸಿದ್ದಳು. ನಾನಿಲ್ಲಿ ಹೇಳುತ್ತಿರುವ ಭಾವ ನನಗಿಂತ ಹದಿನೈದು ವರ್ಷ ದೊಡ್ಡವರಾಗಿದ್ದರು ಮತ್ತು ಅವರ ಹೆಂಡತಿಯಾದ ನನ್ನ ಅಕ್ಕ ಹತ್ತು ವರ್ಷ ದೊಡ್ಡವಳಿದ್ದಳು. ಭಾವನವರು ಲಖನೌ ಸೆಕ್ರೆಟರಿಯೇಟ್‌ನಲ್ಲಿ ಸೀನಿಯರ್ ಕ್ಲರ್ಕ್ ಆಗಿದ್ದರು. ಎರಡು ತಿಂಗಳಿಗೊಮ್ಮೆಯಾದರೂ ನಮ್ಮ ಮನೆಗೆ ಅಕ್ಕನೊಂದಿಗೆ ಬರುತ್ತಿದ್ದರು. ಮದುವೆಯಾಗಿ ಎಂಟು ವರ್ಷ ಕಳೆದಿದ್ದರೂ ಅವರಿಗೆ ಮಕ್ಕಳಾಗಿರಲಿಲ್ಲ.

ನನ್ನ ಇಂಟರ್‌ಮೀಡಿಯಟ್ ಪರೀಕ್ಷೆಗಳು ಮುಗಿದಿದ್ದವು. ಆಗ ಮನೆಗೆ ಬಂದಿದ್ದ ಅವರು 'ತಾನು ಮೇ ತಿಂಗಳಿನಲ್ಲಿ ಮಸೂರಿ ಮತ್ತು ಡೆಹರಾಡೂನ್‌ಗೆ ಹೋಗುತ್ತಿರುವುದಾಗಿಯೂ ತನ್ನೊಂದಿಗೆ ನನ್ನನ್ನು ಮತ್ತು ಎರಡನೇ ಅಕ್ಕನನ್ನು ಜೊತೆಗೆ ಕಳುಹಿಸಿಕೊಡಬೇಕೆಂದು ನನ್ನ ತಂದೆಯನ್ನು ಒತ್ತಾಯಿಸಿದ್ದರು. ತಂದೆಯಂತೂ ನಗರವನ್ನು ಬಿಟ್ಟು ಹೊರಗೆ ಹೋದವರಲ್ಲ. ತಂದೆಗೆ ತನ್ನ ನಗರವೇ ಸ್ವರ್ಗವೆನಿಸಿತ್ತು. ಮೇಲಾಗಿ ಪ್ರವಾಸದ ಬಗ್ಗೆ ಅವರಿಗೆ ಆಸಕ್ತಿ ಇರಲಿಲ್ಲ. 'ತಂದೆ ದುಡ್ಡು ಉಳಿಸಲು ಹೀಗೆ ಮಾಡುತ್ತಿದ್ದಾರೆ' ಎಂಬುದು ನಮ್ಮ ಗ್ರಹಿಕೆ ಆಗಿತ್ತು. ಆದರೆ ತಂದೆ ಕೂಡ ಆಕ್ಷೇಪ ವ್ಯಕ್ತಪಡಿಸದೆ ಒಪ್ಪಿಬಿಟ್ಟರು. ಆ ಪ್ರವಾಸದಲ್ಲಿಯೇ ನನಗೆ ಹಾಗೂ ಅಕ್ಕನಿಗೆ ಭಾವನ ನಿಜರೂಪ, ವರ್ತನೆಯ ದರ್ಶನವಾದದ್ದು. ಅವರಿಗೆ ಪ್ರತಿದಿನ ಕನಿಷ್ಠ ಒಂದು ಬಾಟಲು ಶರಾಬು ಮತ್ತು ಅದರೊಂದಿಗೆ ಸ್ತ್ರೀಸಂಗ ಬೇಕಿತ್ತು ಎಂಬ ನಗ್ನಸತ್ಯ ಅರಿವಾಯಿತು. ಹಾಗಾಗಿ ಅವರು ಸರಿಯಾಗಿ ಯೋಚಿಸಿಯೇ ಯೋಜನೆ ರೂಪಿಸಿ ನಮ್ಮಿಬ್ಬರನ್ನು ಕರೆದುಕೊಂಡು ಬಂದಿದ್ದರು. ಬೇರೆಬೇರೆ ದಿನಗಳಲ್ಲಿ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಅವರು ನನ್ನ ಹಾಗೂ ಅಕ್ಕನ ಮೇಲೆ ಬಲಾತ್ಕಾರ ಎಸಗಿದ್ದರು. ಜೊತೆಗೆ ತಮ್ಮ ಆ ಹೀನಕೃತ್ಯವನ್ನು ರಹಸ್ಯ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದರು. ಅದಾದ ನಂತರ...

ನನ್ನ ಅಕ್ಕ ನನ್ನ ಹಾಗೆ ಇರಲಿಲ್ಲ. 'ಇನ್ನೊಮ್ಮೆ ಇಂಥ ಕೃತ್ಯ ಎಸಗಲು ಪ್ರಯತ್ನಿಸಿದರೆ ನಿಮ್ಮ ಮುಖದ ನೀರು ಇಳಿಸಿಬಿಡುತ್ತೇನೆ' ಎಂದು ಧಮಕಿ ಹಾಕಿದ್ದಳು. ಆದರೆ ನನಗೆ ಹಾಗೆ ಮಾಡಲು ಸಾಧ್ಯವಾಗಲಿಲ್ಲ. ಹಾಗಾಗಿ ಈ ಮಹಾನಗರಕ್ಕೆ ಬರುವವರೆಗೆ ನಾನು ಅವರ ಕಾಮತೃಷೆಗೆ ಬಲಿಯಾಗುತ್ತಿದ್ದೆ. ನೀನೂ ಕೂಡ ನಿನ್ನ ಅಕ್ಕನ ಹಾಗೆ ಬೋಲ್ಡ್ ಆಗಬೇಕಿತ್ತು ಎಂದು ನೀವು ಹೇಳಬಹುದು. ಆದರೆ ಹಾಗಾಗಲು ನನ್ನಿಂದ ಸಾಧ್ಯವಾಗಲಿಲ್ಲ. ಒಂದು ಪಕ್ಷ ಹಾಗೆ ಆಗಿದ್ದಿದ್ದರೆ ನಿಮ್ಮ ಈ ಉದಾರತೆಯ ಪ್ರದರ್ಶನದ ಸಮಯದಲ್ಲಿಯೇ ಎಲ್ಲವನ್ನು ಮುಕ್ತವಾಗಿ